ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾಳಿ

ಸಿ.ಸಿ ನಂಬರ್.39/2024

ಪಿರ್ಯಾದುದಾರರು ಃ- ರಾಜ್ಯ – ನ್ಯಾಮತಿ ಪೋಲೀಸ್ ಠಾಣೆ

ವಿರುದ್ಧ

ಆರೋಪಿಃ- ರಮೇಶ್ ನಾಯ್ಕ್ ಬಿನ್ ಯಂಕಾನಾಯ್ಕ ,
ವಯಸ್ಸು 45 ವರ್ಷ
ವಾಸಃ ಸಾಲಬಾಳು ಗ್ರಾಮ,
ನ್ಯಾಮತಿ ತಾಲ್ಲೂಕು, ದಾವಣಗೆರೆ.

**ದೋಷಾರೋಪಣೆ**

ಶ್ರೀ ಪುಣ್ಯಕೋಟಿ ಎಸ್ ಎನ್., ಬಿ.ಎ., ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹೊನ್ನಾಳಿ ಆದ ನಾನು ನಿಮ್ಮ ಮೇಲೆ ಮಾಡುತ್ತಿರುವ ದೋಷಾರೋಪಣೆ ಏನೆಂದರೆಃ

ದಿನಾಂಕ 05-07-2023 ರಂದು ಮಧ್ಯಾಹ್ನ 2-00 ಗಂಟೆ ಸಮಯದಲ್ಲಿ ನ್ಯಾಮತಿ ಪೋಲೀಸ್ ಠಾಣಾ ವ್ಯಾಪ್ತಿಯ ಸಾಲಬಾಳು ಕ್ರಾಸ್ ಬಳಿಯ ಹೊನ್ನಾಳಿ-ಶಿವಮೊಗ್ಗ ರಸ್ತೆಯ ಬದಿಯಲ್ಲಿರುವ ಪೆಟ್ಟಿಗೆ ಅಂಗಡಿಯ ಮುಂಭಾಗದ ಸಾರ್ವಜನಿಕ ಸ್ಥಳದಲ್ಲಿ ಆರೋಪಿ ರಮೇಶ್ ನಾಯ್ಕ್ ಆದ ನೀವು ಸರ್ಕಾರದಿಂದ ಯಾವುದೇ ಪರವಾನಿಗೆಯನ್ನು ಪಡೆಯದೇ ಮದ್ಯವನ್ನು ಅಕ್ರಮವಾಗಿ ಮಾರಾಟ ಮಾಡಿರುತ್ತೀರಿ. ಆ ಮೂಲಕ ಆರೋಪಿಯಾದ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32 ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

2. ಮೇಲ್ಕಂಡ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನೀವು ಮೇಲೆ ತಿಳಿಸಿದ ಮದ್ಯದ ಪೌಚ್‌ಗಳನ್ನು ಅಕ್ರಮವಾಗಿ ಹೊಂದುವುದು ಕಾನೂನು ಬಾಹಿರವೆಂದು

ತಿಳಿದಿದ್ದರೂ ಸಹ ಹೈವಾರ್ಡ್ಸ್ ಚೀಯರ್ಸ್ ವಿಸ್ಕಿ ಯ 90 ಎಂ.ಎಲ್ ನ ಒಟ್ಟು 31 ಮಧ್ಯದ ಪೌಚ್ ಗಳಿದ್ದು ಅವುಗಳ ಒಟ್ಟು ಮೌಲ್ಯ 1085/- ರೂ ಮೌಲ್ಯದ ಮಧ್ಯವನ್ನು ಮಾರಾಟ ಮಾಡುವ ಉದ್ದೇಶದಿಂದ ಅಕ್ರಮವಾಗಿ ಸಂಗ್ರಹ ಮಾಡಿರುತ್ತೀರಿ. ಆ ಮೂಲಕ ಆರೋಪಿಯಾದ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ.34 ರಡಿಯಲ್ಲಿ ದಂಡಿಸಲ್ಪಡುವ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಮಾಡಿರುತ್ತೀರಿ.

ಮೇಲ್ಕಂಡ ಆಪಾದನೆಯನ್ನು ಆರೋಪಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯಿತು.

ಸ್ಥಳಃ ಹೊನ್ನಾಳಿ ,
ದಿನಾಂಕಃ 13-05-2024

**(ಪುಣ್ಯಕೋಟಿ ಎಸ್ ಎನ್.)**
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ .,
ಹೊನ್ನಾಳಿ.